ಗಣಕಯಂತ್ರಕ್ಕೆ ಅಳವಡಿಸುವಲ್ಲಿ ಸಾಧ್ಯವಾಗಿರುವುದಿಲ್ಲವೆಂಬುದು ಕೂಡ ತದನಂತರ ಗಮನಕ್ಕೆ ಬಂದಿದೆ.

ಆದುದರಿಂದ, ಶಾಖೆಯಲ್ಲಿನ ಕಡತಗಳು ಭೌತಿಕವಾಗಿ ಮುಕ್ತಾಯಗೊಂಡಿದ್ದರೂ ಸಹ ಅವುಗಳನ್ನು ಗಣಕ ಯಂತ್ರದಲ್ಲಿ ಮುಕ್ತಾಯಗೊಳಿಸದಿದ್ದುದರಿಂದಾಗಿ, ತಪಾಸಣಾ ವೇಳೆಯಲ್ಲಿ ಅನೇಕ ಕಡತಗಳು ಕಣ್ಮರೆಯಾಗಿರಬಹುದೆಂಬ ಅಭಿಪ್ರಾಯಪಡಲಾಗಿತ್ತು. ಆದರೆ, ಸೂಕ್ತ ಪರಿಶೀಲನೆ ನಡೆಸಿದ ತರುವಾಯ ಮೇಲ್ಕಾಣಿಸಿದ ಕಾರಣದಿಂದಾಗಿ ಉಂಟಾಗಿರುವ ವ್ಯತ್ಯಾಸವು ಗಮನಕ್ಕೆ ಬಂದಿದ್ದು, ಈಗ ಸದರಿ ವ್ಯತ್ಯಾಸವನ್ನು ಭೌತಿಕವಾಗಿ ಮತ್ತು ಗಣಕಯಂತ್ರದಲ್ಲಿ ಸರಿದೂಗಿಸಲು ಕ್ರಮ ಜರುಗಿಸಲಾಗುತ್ತಿದೆ. ಈ ಕಾರಣದಿಂದಾಗಿ ವೈದ್ಯಕೀಯ ಶಿಕ್ಷಣ ಶಾಖೆಯಲ್ಲಿ ಯಾವುದೇ ಕಡತಗಳು ಕಣ್ಮರೆಯಾಗಿರುವುದಿಲ್ಲವಾದ್ದರಿಂದ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಕುಕ 173 ಎಂಎಂಇ 2012

(ಎಸ್.ಎ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು

ಜೇವರ್ಗಿ ತಾಲ್ಲೂಕಿಗೆ ಭವನ ಮಂಜೂರಾತಿ

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್
ನಾರಿಬೋಳ್ (ಜೇವರ್ಗಿ)

589

ಅ) ಜೇವರ್ಗಿ ತಾಲ್ಲೂಕಿಗೆ ಇಲ್ಲಿವರೆಗೆ ಅಂಬೇಡ್ಕರ್ ಭವನ, ಕನಕ ಭವನ, ವಾಲ್ಮೀಕಿ ಭವನ ಮತ್ತು ಬಾಬು ಜಗಜೀವನ್ ರಾಮ್ ಭವನಗಳು ಎಷ್ಟು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ; (ವಿವರ ನೀಡುವುದು)

ಆ) ಮಂಜೂರಾತಿಗಾಗಿ ಪ್ರಸ್ತಾವನೆ ಬಂದಿದೆಯೇ;

ಇ) ಮಂಜೂರಾತಿ ಪ್ರಸ್ತಾವನೆ ಪರಿಗಣಿಸದೆ ಇರಲು ಕಾರಣವೇನು?

ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು

ಅ) **ಸಮಾಜ ಕಲ್ಯಾಣ ಇಲಾಖೆ :** – 1995 ರಿಂದ 31.03.2011 ರವರೆಗೆ 05 ಅಂಬೇಡ್ಕರ್ ಭವನಗಳಿಗೆ ರೂ. 145.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. 2011–12ನೇ ಸಾಲಿನ ಅನುದಾನದಲ್ಲಿ ಜೇವರ್ಗಿ ತಾಲ್ಲೂಕಿಗೆ

ಐದು ಅಂಬೇಡ್ಕರ್ ಭವನಗಳು, ಎರಡು ಬಾಬು ಜಗಜೀವನ್‌ರಾಂ ಭವನ ಮತ್ತು 03 ಸಮುದಾಯ ಭವನಗಳನ್ನು ತಲಾ ರೂ. 10.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಒಟ್ಟು ರೂ. 100.00 ಲಕ್ಷಗಳಿಗೆ ಮಂಜೂರಾತಿ ನೀಡಿ ಮೊದಲ ಕಂತಾಗಿ ರೂ. 50.00 ಲಕ್ಷಗಳನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ : – ಸರ್ಕಾರಿ ಆದೇಶ ಸಂಖ್ಯೆ : ಸಕಇ 165 ಪವಯೋ 2011 ದಿನಾಂಕ : 12.01.2012 ರಲ್ಲಿ ಜೇವರ್ಗಿ ಪಟ್ಟಣದಲ್ಲಿ ರೂ. 25.00 ಲಕ್ಷಗಳಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಮಂಜೂರಾತಿ ನೀಡಿದೆ.

ಕನಕ ಭವನಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಿಸುತ್ತಿಲ್ಲ.

ಆ) ಈಗಾಗಲೇ ವಾಲ್ಮೀಕಿ ಭವನ ಮಂಜೂರಾಗಿದೆ

ಇ) ಅನ್ವಯಿಸುವುದಿಲ್ಲ.

ಸಕಇ 95 ಸ್ವೀಮರ 2012

(ಎ. ನಾರಾಯಣ ಸ್ವಾಮಿ)
ಸಮಾಜ ಕಲ್ಯಾಣ ಹಾಗೂ
ಬಂಧೀಖಾನೆ ಸಚಿವರು

ಕರ್ನಾಟಕ ವಿಧಾನ ಸಭೆ

579

ಶ್ರೀ ವೆಂಕಟಸ್ವಾಮಿ

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷ ಅವಧಿಯಲ್ಲಿ ಹೊಸ ಬಸ್ ಮಾರ್ಗ ವ್ಯವಸ್ಥೆಯನ್ನು ಕಲ್ಪಿಸಿರುವ ಗ್ರಾಮಗಳ ಸಂಖ್ಯೆ ಎಷ್ಟು : (ವಿವರ ನೀಡುವುದು)

ಆ) ದೇವನಹಳ್ಳಿ ತಾಲ್ಲೂಕಿನಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷ ಅವಧಿಯಲ್ಲಿ ಕರಾರಸಾ ನಿಗಮದ ವತಿಯಿಂದ 5 ಹೊಸ ಬಸ್ ಮಾರ್ಗಗಳಲ್ಲಿ